OS No.36-2019
DW-3

ದಿನಾಂಕಃ **10-02-2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ **9** ನೇ ಪ್ರತಿವಾದಿ ಪರವಾಗಿಃ-

ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದೆ, ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-

ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ. ವಾದಿ ಚಂದ್ರಮ್ಮ ನನ್ನ ತಮ್ಮನ ಹೆಂಡತಿ. ಆಕೆಯ ಮದುವೆ ಹಿರಿಯರು ಎಲ್ಲರೂ ಸೇರಿ ಶಾಸ್ತ್ರ ರೀತಿ ನೆರವೇರಿಸಿದ್ದಾರೆ ಎಂದರೆ ಸರಿ. ನನ್ನ ತಮ್ಮ ಅಂದರೆ ವಾದಿಯ ಗಂಡನ ಹೆಸರು ತಿಮ್ಮಪ್ಪ ಎಂದರೆ ಸರಿ. ನಮ್ಮ ತಂದೆಯ ಹೆಸರು ಗಿರಿಯಪ್ಪ, ಅವರಿಗೆ ಐದು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು. ವಾದಿ ಹಾಕಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ದಾವೆಯಲ್ಲಿ ಏನು ಪರಿಹಾರ ಕೇಳಿದ್ದಾರೆ ಎಂದು ನನಗ ಗೊತ್ತಾಗುವುದಿಲ್ಲ. ದಾವಾ ಆಸ್ತಿಗಳು ಎಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ವಾದಿ ತನ್ನ ಗಂಡನಿಗೆ ಬರಬೇಕಾಗಿದ್ದ ಭಾಗವನ್ನು ತನಗೆ ಕೊಡಲು ದಾವೆಯಲ್ಲಿ ಕೇಳಿಕೊಂಡಿದ್ದಾಳೆ ಎಂದರೆ ಸರಿ. ವಾದಿಗೆ ಒಬ್ಬ ಮಗನಿದ್ದನು ಎಂದರೆ ಸರಿ, ಆತನು ಅಪಘಾತದಲ್ಲಿ ತೀರಿಕೊಂಡಿದ್ದನು. ಆತನು ತೀರಿಕೊಳ್ಳುವ ಪೂರ್ವದಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದ ಎಂದರೆ ಸರಿಯಲ್ಲ, ಆತನು ಇಂಜಿನಿಯರ್ ಇದ್ದ ಎಂದರೆ ಸಾಕ್ಷಿಯು ಓದಿದ್ದ ಎನ್ನುತ್ತಾರೆ. ವಾದಿಯ ಗಂಡ ತಿಮ್ಮಪ್ಪ ಈಗ ಬೇರೆ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಕಲ್ಲತ್ತಗಿರಿ ದೇವಸ್ಥಾನದಲ್ಲಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ, ನಾವು ಕೂಡ ಮದುವೆಗೆ ಹೋಗಿದ್ದೆವು. 2 ನೇ ಹೆಂಡತಿಯ ಊರು ಜೋಡಿಬೋಕಿಕೆರೆ ಇರುತ್ತದೆ. ನಮ್ಮ ಮೂರು ಜನರ ಗಂಡನ ಮನೆ ಕೂಡ ಅದೇ ಊರಲ್ಲಿ ಇದೆ ಎಂದರೆ ಸರಿ. ನಮ್ಮ ಅಣ್ಣ-ತಮ್ಮಂದಿರೂ ಕೂಡ ಅದೇ ಊರಿನ ಕನ್ಯೆಯರನ್ನು ಮದುವೆ ಆಗಿದ್ದಾರೆ ಎಂದರೆ ಸರಿ.

2. ವಾದಿಯ ಗಂಡನಿಗೆ ಎರಡನೇ ಹೆಂಡತಿಯೊಂದಿಗೆ ಮೊದಲಿನಿಂದಲೂ ಸಂಬಂಧ ಇತ್ತು ಎಂದರೆ ಸರಿ, ಅದನ್ನು ಮುಚ್ಚಿಟ್ಟು ವಾದಿಯೊಂದಿಗೆ ಆತನ ಮದುವೆ ಮಾಡಲಾಗಿತ್ತು ಎಂದರೆ ಸರಿ. ಮದುವೆಯಾದ ನಂತರ ಮತ್ತು ಮಗು ಹುಟ್ಟಿದ ನಂತರ ಸದರಿ ವಿಷಯ ಗೊತ್ತಾಗಿ ವಾದಿ ಮತ್ತು ಆಕೆಯ ಗಂಡನಲ್ಲಿ ಅಭಿಪ್ರಾಯ ಭೇದಗಳು ಪ್ರಾರಂಭವಾದವು ಎಂದರೆ ಸರಿ. ವಾದಿಯ ಮನೆಯ ಹಿರಿಯರು ಬಂದು ಬುದ್ದಿವಾದ ಹೇಳಿದರೂ ಕೂಡ ಆಕೆಯ ಗಂಡನು ಕೇಳದೇ ಇದ್ದ ಕಾರಣ ಆಕೆ ತನ್ನ ಮಗನೊಂದಿಗೆ ತವರು ಮನೆ ಸೇರಿಕೊಂಡಳು ಎಂದರೆ ಸರಿ. ವಾದಿಯ ಮಗ ಆಕೆಯ ಜೊತೆ ತವರು ಮನೆಗೆ ಹೋದಾಗ ಆತನಿಗೆ 7-8 ವರ್ಷ ವಯಸ್ಸು ಇರಬಹುದು ಎಂದರೆ ಸಾಕ್ಷಿಯು ವಯಸ್ಸಿಗೆ ಬಂದಿರಬಹುದು ಎನ್ನುತ್ತಾರೆ. ನನಗೆ ಸರಿಯಾದ ವಯಸ್ಸು ಹೇಳಲು ಬರುವುದಿಲ್ಲ.

ವಾದಿ ತನ್ನ ತವರು ಮನೆ ಸೇರಿಕೊಂಡು 20 ವರ್ಷದ ಮೇಲೆ ಆಗಿದೆ. ವಾದಿಯೇ ತನ್ನ ಮಗನನ್ನು ಓದಿಸಿ ಸಂರಕ್ಷಣೆ ಮಾಡಿದ್ದಳು ಎಂದರೆ ಸಾಕ್ಷಿಯು, ನನ್ನ ತಮ್ಮ ಮಾಡಿದ್ದಾನೆ ಎನ್ನುತ್ತಾರೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಗ ಕೆ.ಆರ್. ನಗರದಲ್ಲಿ ದುಡಿಮೆ ಮಾಡಿಕೊಂಡು ಓದುತ್ತಿದ್ದನು, ಆತನನ್ನು ನನ್ನ ತಮ್ಮನೇ ಕಾಲೇಜಿಗೆ ಸೇರಿಸಿದ್ದನು. ನನ್ನ ತಮ್ಮನೇ ಶಾಲೆಗೆ ಸೇರಿಸಿದ್ದ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ವಾದಿ ಮತ್ತು ಆಕೆಯ ತವರು ಮನೆಯವರು ಆತನನ್ನು ಓದಿಸಿದ್ದರು ಎಂಬುದು ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದ ಪತ್ರದ 3 ಮತ್ತು 4 ನೇ ಖಂಡಿಕೆಯಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ಯಾವ ಆಧಾರದ ಮೇಲೆ ಸದರಿ ವಿಷಯವನ್ನು ನಮೂದಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದನ್ನು ನಾನು ಬರೆಸಿದ್ದೇನೆ ಎನ್ನುತ್ತಾರೆ. ನನ್ನ ತಮ್ಮ 2 ನೇ ಮದುವೆಯನ್ನು ಯಾವ ವರ್ಷದಲ್ಲಿ ಮಾಡಿಕೊಂಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ಆತನು ನ್ಯಾಯಾಲಯದಿಂದ ವಿಚ್ಛೇಧನ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ತಿಮ್ಮಪ್ಪ ತನ್ನ ಮಗನೊಂದಿಗೆ ಬೀರೂರಿನಲ್ಲಿ ಯಾವ ವರ್ಷ ವಾಸವಾಗಿದ್ದ ಎಂದು ನನಗೆ ಹೇಳಲು ಬರುವುದಿಲ್ಲ. ಅವರು ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ನಿವೇಶನವನ್ನು ಖರೀದಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾರ ಹೆಸರಿಗೆ ಖರೀದಿಸಿದರು, ಯಾರು ದುಡ್ಡು ಕೊಟ್ಟರು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ 2 ನೇ ಹೆಂಡತಿ ಟೀಚರ್ ಕೆಲಸ ಮಾಡುತ್ತಾರೆ, ಅವರು ಅರಸೀಕೆರೆಯಲ್ಲಿ ವಾಸವಿದ್ದಾರೆ. ವಾದಿ ಮತ್ತು ಆಕೆಯ ಗಂಡನ 2 ನೇಯ ಹೆಂಡತಿ ಎಂದೂ ಒಟ್ಟಿಗೆ ಜೀವನ ನಡೆಸಿಲ್ಲ ಎಂದರೆ ಸರಿ. ವಾದಿ ತವರು ಮನೆಗೆ ಹೋದ ನಂತರದಲ್ಲಿ 2 ನೇ ಪ್ರತಿವಾದಿಯೊಂದಿಗೆ ಆಕೆಯ ಭೇಟಿ ಆಗಿಲ್ಲ, ಅವರು ಸಂಸಾರ ಮಾಡಿಲ್ಲ ಎಂದರೆ ಸರಿ. ವಾದಿಯ ಮಗ ರೈಲು ಅಪಘಾತದಲ್ಲಿ ತೀರಿಕೊಂಡಿದ್ದಾನೆ ಎಂದು ಮಾತ್ರ ಗೊತ್ತು, ಆತ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. 2013 ನೇ ಸಾಲಿನಲ್ಲಿ ಪಂಚಾಯತಿ ಆದ ಬಗ್ಗೆ ಮಾತ್ರ ಗೊತ್ತು, ಅದರ ವಿವರಗಳು ಮತ್ತು ಹಾಜರಿದ್ದ ಹಿರಿಯರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಗೆ ಕೂಡ ದಾವಾ ಆಸ್ತಿಗಳಲ್ಲಿ ಹಕ್ಕು ಇದೆ ಎಂದರೆ ಸರಿ, ಸಾಕ್ಷಿಯು ಇಬ್ಬರಿಗೂ ಇದೆ ಎನ್ನುತ್ತಾರೆ. 2 ನೇ ಪ್ರತಿವಾದಿಯ 2 ನೇ ಹೆಂಡತಿ ಮತ್ತು ಮಗ ಕೂಡ ಈ ಪ್ರಕರಣದಲ್ಲಿ ಪಕ್ಷಗಾರರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಹಣ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲ, ತಂದೆ ಮಗನ ನಡುವೆ ಆದ ವ್ಯವಹಾರದ ಬಗ್ಗೆ ನಾನು ತಲೆ ಹಾಕಿಲ್ಲ.

4. ನಿವೇಶನವನ್ನು ವಾದಿಯ ಮಗನೇ ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದನು ಅದಕ್ಕೆ 3 ನೇ ವ್ಯಕ್ತಿಗಳು ಯಾರೂ ಕೂಡ ಯಾವುದೇ ರೀತಿಯ ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಗ ತೀರಿಕೊಂಡ ಮೇಲೆ ಈಗ ನಿವೇಶನ ವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿ ಆಕೆಯು ಸ್ವಾಧೀನದಲ್ಲಿ ಇದ್ದಾಳೆ ಎಂದರೆ ನನಗೆ ಗೊತ್ತಿಲ್ಲ.

ಮಗನ ಓದಿಗೆ ಮತ್ತು ಸಂಸಾರಕ್ಕೆ ಆಕೆಯ ಅನಾರೋಗ್ಯದ ವೆಚ್ಚಕ್ಕೆ ಅಡಚಣೆ ಇದ್ದ ಕಾರಣ ವಾದಿ ಸದರಿ ನಿವೇಶನವನ್ನು ತನ್ನ ತಮ್ಮನಿಗೆ ಶುದ್ಧ ಕ್ರಯಕ್ಕೆ ಮತ್ತು ಒಳ್ಳೆಯ ಬೆಲೆಗೆ ಮಾರಾಟ ಮಾಡಿದ್ದಾಳೆ ಎಂದರೆ ಸರಿಯಲ್ಲ. ನನ್ನ ತಮ್ಮ ಹೃದಯದ ಕಾಯಿಲೆಯಿಂದ ಬಳಲುತ್ತಿದ್ದ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. 2 ನೇ ಪ್ರತಿವಾದಿಗೆ ಯಾವುದೇ ರೀತಿಯ ಕಾಯಿಲೆಗಳು ಇರಲಿಲ್ಲ, 2 ನೇ ಹೆಂಡತಿ ಮತ್ತು ಅಕ್ಕ-ತಂಗಿಯರು ಮತ್ತು ಅಣ್ಣ-ತಮ್ಮಂದಿರು ಕಿರುಕುಳ ಕೊಟ್ಟ ಕಾರಣ ಮನನೊಂದು ಆತ ತೀರಿಕೊಂಡಿದ್ದಾನೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದಲ್ಲಿ ಯಾವ ವರ್ಷ ವಿಭಾಗ ಆಗಿತ್ತು ಎಂದು ಹೇಳಲು ಬರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಕೂಡ ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳು ಈಗಲೂ ಕೂಡ ನನ್ನ ತಂದೆಯ ಹೆಸರಿನಲ್ಲಿ ಇವೆ. ನಮ್ಮ ಕುಟುಂಬದಲ್ಲಿ ನಾನು ಹೇಳಿದಂತೆ ಯಾವುದೇ ರೀತಿಯ ವಿಭಾಗ ಆಗಿಲ್ಲ, ಕೇವಲ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಐಟಂ ನಂ. 7 ಮತ್ತು 8 ನ್ನು ಸ್ವಯಾರ್ಜಿತವಾಗಿ ಖರೀದಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ಸರಿಯಾಗಿ ಗೊತ್ತಿರದಿದ್ದರೂ ಕೂಡ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u>: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ,
ತರೀಕೆರೆ.
ಸಿಸಿ ನಂಬರ್ **/202**

| | | | |
|---|---|---|---|
| ಸಾಕ್ಷಿಯ ಹೆಸರು | : | | ಸಿ.ಡಬ್ಲ್ಯೂ |
| ತಂದೆಯ ಹೆಸರು | : | | ಪಿ.ಡಬ್ಲ್ಯೂ |
| ವಯಸ್ಸು | : | ವರ್ಷ | |
| ಉದ್ಯೋಗ | : | | |
| ವಾಸ ಸ್ಥಳ | : | | |

ದಿನಾಂಕಃ**12-11-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ

ನಾನು ಆರೋಪಿತರನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ.ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ **:** ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.